MATTER UNDER RULE 312

re : The reported statement made by the Chairman of the Irrigation Advisory Board regarding Construction of dams in Uttara Kannada District.

† ಶ್ರೀಮತಿ ಅನಸೂಯ ಗಜಾನನ ಶರ್ಮ (ಅಂಕೋಲ).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರದ ಜವಾಬ್ದಾರಿ ಜಾಗದಲ್ಲಿರತಕ್ಕ ಅಂದರೆ ನೀರಾವರಿ ಸಲಹಾ ಮಂಡಲಿಯ ಅಧ್ಯಕ್ಷರು ಪತ್ರಿಕೆಗಳಲ್ಲಿ ಇತ್ತೀಚೆಗೆ ಒಂದು ಲೇಖನವನ್ನು ಬರೆದಿದ್ದಾರೆ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ನಿರ್ಮಿತವಾಗಿರುವ ಕಾಳಿ ಯೋಜನೆಯ ಮೊದಲನೇ ಹಂತವು ಇಡೀ ಏಷ್ಯಾದಲ್ಲಿಯೇ ಅತಿ ದೊಡ್ಡ ಯೋಜನೆಯಾಗಿದೆ. ಅದೇ ರೀತಿ ಶರಾವತಿ ಕೂಡ ದೊಡ್ಡ ಯೋಜನೆಯಾಗಿದೆ. ನಮ್ಮ ಜಿಲ್ಲೆಯ ಒಂದು ಕಡೆಯಲ್ಲಿ ಶರಾವತಿ ಯೋಜನೆಯೂ, ಇನ್ನೊಂದು ಕಡೆ ಕಾಳಿ ಯೋಜನೆಯೂ ಇವೆ. ನಮ್ಮ ಜಿಲ್ಲೆಯಲ್ಲಿ ಇನ್ನು ಮುಂದೆ ಯಾವ ಆಣೆಕಟ್ಟುಗಳನ್ನೂ ಕಟ್ಟಬಾರದು, ಅವುಗಳನ್ನು ಕಟ್ಟುವುದರಿಂದ ನಮ್ಮ ಜಿಲ್ಲೆ ಹಾಳಾಗುತ್ತದೆ. ನಾವು ಬದುಕುವುದಕ್ಕಾಗುವುದಿಲ್ಲ. ಕಾರಣ ಅಲ್ಲಿರತಕ್ಕ ಮರಗಳನ್ನೆಲ್ಲಾ ಕಡಿದುಹಾಕುತ್ತಾರೆ. ಇದರಿಂದ ಭೂಕಂಪವಾಗುತ್ತದೆ. ಅರಣ್ಯ ನಾಶವಾದರೆ ನಮ್ಮ ಜಿಲ್ಲೆ ಮರುಭೂಮಿಯಾಗುತ್ತದೆಂದು ನಮ್ಮ ಜಿಲ್ಲೆಯ ಜನ ತೊಳಲಾಡುತ್ತಿದ್ದಾರೆ. ಮತ್ತು ಸರ್ಕಾರದವರನ್ನು ಬೇಡಿಕೊಳ್ಳುತ್ತಿದ್ದಾರೆ. ಅದೇ ರೀತಿ ನಿಸರ್ಗದ ಮಹತ್ವವನ್ನು ಅರಿತಂಥ ಅಂತರರಾಷ್ಟ್ರೀಯ ಖ್ಯಾತಿಯುಳ್ಳ ತಜ್ಞರು ಈ ಪರಿಸ್ಥಿತಿಯನ್ನು ನೋಡಿ ಸರ್ಕಾರದವರನ್ನು ಕೇಳಿಕೊಂಡಿದ್ದಾರೆ. ನಮ್ಮ ಬೇಡಿಕೆ ಏನಿದೆ ಅದು ನ್ಯಾಯವಾದುದು. ಈ ಮಂಡಲಿಗೆ ಕಳೆದ ಜನವರಿ ೯ನೇ ತಾರೀಖು ಅಧ್ಯಕ್ಷರನ್ನು ನೇಮಿಸಿದ್ದು ಎಲ್ಲರಿಗೂ ಗೊತ್ತಿದೆ ೨ ತಿಂಗಳ ನಂತರ ಈ ಮಂಡಲಿಯು ತನ್ನ ಕೆಲಸ ಮಾಡುವುದಕ್ಕೆ ಪ್ರಾರಂಭಮಾಡಿತು. ಅನಂತರ ಸರ್ಕಾರದ ಜವಾಬ್ದಾರಿ ಸ್ಥಾನದಲ್ಲಿರತಕ್ಕ ಅಧ್ಯಕ್ಷರು ಈ ರೀತಿ ಒಂದು ಲೇಖನವನ್ನು ಬರೆದಿದ್ದಾರೆ. ಅವರು ಏನು ಬರೆದಿದ್ದಾರೆ ಅದನ್ನು ತಮ್ಮ ನಜರಿಗೆ ನಾವು ತರಬೇಕಾಗಿದೆ. ಅದು ಬಹಳ ಅಪಮಾನಕರವಾದುದು ಮತ್ತು ಬೇಜವಾಬ್ದಾರಿಯುತವಾದುದು. ಇದೊಂದು ಕ್ಷುಲ್ಲಕ ವಿಚಾರ, ದೇಶ ವಿರೋಧಿ ಕೃತ್ಯ, ಮುಂದಿನ ತಲೆಮಾರಿಗೆ ಇದರಿಂದ ಬಹಳ ಕಷ್ಟವಾಗುತ್ತದೆ, ಇನ್ನೂ ಮುಂತಾಗಿ ಹೇಳಿದ್ದಾರೆ. ಈ ವಿಚಾರ ನಿಜವಾಗಿಯೂ ಸಖೇದಾಶ್ಚರ್ಯಕರವಾದುದು. ಪರಿಸರ ಮಾಲಿನ್ಯವನ್ನು ಸರಿಪಡಿಸಬೇಕಾಗುತ್ತದೆಂದು ಅವರು ಹೇಳಿರುವುದನ್ನು ನೋಡಿದರೆ ನನಗೆ ಅರ್ಥವಾಗುತ್ತಿಲ್ಲ. ನಾವು ಬದುಕಬೇಕೆಂದು ನಮ್ಮ ಜಿಲ್ಲೆಯ ಜನ ಹೇಳಿದರೆ ಇದು ದೇಶದ್ರೋಹ ಕೃತ್ಯವೆಂದು ಹೇಳುತ್ತಿದ್ದಾರೆ.

ಮಾನ್ಯ ಅಧ್ಯಕ್ಷರೆ, ಪೂನದಲ್ಲಿ ಮೌರ್ವಿ ಡ್ಯಾಂನ ಧಾರುಣ ಕಥೆಯನ್ನು ನಾವು ಕೇಳಿದ್ದೇವೆ. ನಮ್ಮ ಸೌತ್ ಕೆನರಾದಲ್ಲಿ ಕೂಡ ಒಂದು ಡ್ಯಾಂ ಒಡೆದು ಹೋಯಿತು. ಈಗ ೫ ಕೋಟಿ ರೂಪಾಯಿ ಖರ್ಚು ಮಾಡಿ ಈ ಯೋಜನೆ ಮಾಡಬೇಕೆಂದು ಹೇಳುತ್ತಿದ್ದಾರೆ. ಇದು ಸರಿಯಲ್ಲ. ಜವಾಬ್ದಾರಿ ಜಾಗದಲ್ಲಿ ಇರತಕ್ಕ ವ್ಯಕ್ತಿಯೊಬ್ಬರು ಈ ರೀತಿ ಲೇಖನವನ್ನು ಬರೆದಿರುವುದು ಸರಿಯಲ್ಲ. ತಜ್ಞರ ಸಮಿತಿಯ ಮೇಲೆ ಒತ್ತಾಯವನ್ನು ತರುವುದಕ್ಕಾಗಿ ಈರೀತಿ ಬರೆದಿದ್ದಾರೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಯೋಗ್ಯ ಕ್ರಮವನ್ನು ತೆಗೆದುಕೊಂಡು ಕೂಡಲೇ ಅವರನ್ನು ಅಲ್ಲಿಂದ ಸಸ್ಪೆಂಡ್ ಮಾಡಬೇಕೆಂದು ಕೈ ಜೋಡಿಸಿ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಕೂಡಲೇ ಅವರನ್ನು ಡಿಸ್‌ಮಿಸ್ ಮಾಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೊಂದು ವಿಚಾರವನ್ನು ತಮ್ಮ ಮುಂದೆ ಹೇಳಬಯಸುವುದೇನೆಂದರೆ, ನಿಸರ್ಗದ ಅಸಮತೋಲವನ್ನು ಹೇಗಾದರೂ ಸರಿಪಡಿಸಬಹುದೆಂದು ಅವರು ಹೇಳಿದ್ದಾರೆ. ತುಂಗಭದ್ರ ಯೋಜನೆಯಲ್ಲಿ ಎಷ್ಟು ಜಾಗ ಮುಳುಗಿತು ಎಂಬುದು ಗೊತ್ತಾಗಲಿಲ್ಲ. ಕಾಳಿ ಯೋಜನೆಯ ಮೊದಲ ಹಂತದಲ್ಲಿ ೫೯ ಸಾವಿರ ಎಕರೆ ಅರಣ್ಯ ಹೋಯಿತು. ಬೇಡ್ತಿ ಯೋಜನೆಯ ಮೊದಲ ಹಂತದಲ್ಲಿ ೨೫–೩೦ ಸಾವಿರ ಎಕರೆ ಅರಣ್ಯ ಪ್ರದೇಶ ಹೋಗುತ್ತದೆ ಜೊತೆಗೆ ಸಾಗುವಳಿ ಜಮೀನು ಬೇರೆ ಹೋಗುತ್ತದೆ. ಆದರೆ ಅವರು ಇದನ್ನೆಲ್ಲ ಸೇರಿಸದೆ ಬೇರೆ ಬೇರೆ ಬರೆದಿದ್ದಾರೆ. ಹಾಗಾದರೆ ಅವರ ಉದ್ದೇಶವಾದರೂ ಏನು? ಈ ಬಗ್ಗೆ ನಮ್ಮ ಜಿಲ್ಲೆಯ ಜನರೆಲ್ಲ ಅಡಿಕೊಳ್ಳುತ್ತಾರೆ. ಕೆಪಿಸಿ. ಯವರು ದುಡ್ಡು ತಿನ್ನಲಿಕ್ಕೆ ಇಂಥ ಕೆಲಸ ಮಾಡುತ್ತಾರೆಂದು ಹೇಳುತ್ತಾರೆ. ಮತ್ತು ಅವರಿಗೆ ಇದರಲ್ಲಿ ಪಾಲು ಇದೆಯೇ ಎಂದು ಕೇಳುತ್ತಾರೆ.

ಅಧ್ಯಕ್ಷರು.—ತಾವು ವಿಷಯವನ್ನು ಪ್ರಸ್ತಾಪ ಮಾಡಿ. ಈ ಮನೆಯ ಸದಸ್ಯರಲ್ಲದೆ ಇರುವವರ ಬಗ್ಗೆ ಮಾತನಾಡುವುದು ತರವಲ್ಲ. ಏಕೆಂದರೆ ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ

SRI H.D. DEVEGOWDA —He has been designated as a Minister of Cabinet rank. The Chief Minister is there He can defend.

ಅಧ್ಯಕ್ಷರು.—ತಾವು ಪದ ಬಳಕೆ ಮಾಡುವಾಗ ಸ್ವಲ್ಪ ಯೋಚನೆ ಮಾಡಿ ಬಳಸಿ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಜನ ಹೇಳುತ್ತಾರೆಂದು ಹೇಳಿದೆ.

ಅಧ್ಯಕ್ಷರು.—ತಮ್ಮ ಟೀಕೆ ಅಂಕಿ ಅಂಶಗಳಿಂದ ಕೂಡಿರಲಿ. ತಾವು ಏನು ಸಮರ್ಥನೆ ಮಾಡ ಬೇಕೋ ಅದನ್ನು ಸಮರ್ಥನೆ ಮಾಡಿ. ಆದರೆ ಪದ ಬಳಕೆ ಮಾಡುವಾಗ ಮಾತ್ರ ಹುಷಾರಾಗಿ ಮಾಡಬೇಕು. ದಯಮಾಡಿ ಟೀಕೆಗೆ ಅವಕಾಶ ಕೊಡಬೇಡಿ.

ಶ್ರೀಮತಿ ಅನಸೂಯ ಗಜಾನನ ಶರ್ಮ. ಆಯಿತು. ಆದುದರಿಂದ, ಇಂಥ ಒಂದು ಲೇಖನ ಬರೆದು, ನಿಜವಾದ ನಿಸರ್ಗವನ್ನು ನಾಶ ಮಾಡಿದರೆ ತಿರುಗಿ ಅದನ್ನು ಸರಿಪಡಿಸಲಿಕ್ಕೆ ಆಗುವುದಿಲ್ಲ. ಆದರಿಂದ ನಮ್ಮ ಜಿಲ್ಲೆಗೆ ತುಂಬಲಾಗದ ಹಾನಿಯಾಗುತ್ತದೆ. ಈ ರೀತಿಯಾಗಿ ನೀರಾವರಿಯನ್ನು ಮಾಡಲು ಲೆಕ್ಕ ಬರೆದಿದ್ದಾರೆ. ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ. ಅದುದರಿಂದ, ಈ ಬಗ್ಗೆ ಯೋಗ್ಯ ಕ್ರಮ ತೆಗೆದು ಕೊಳ್ಳಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಮತ್ತು ಅವರನ್ನು ಡಿಸ್‌ಮಿಸ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಸುಶೀಲ ಚೆಲ್ಲರಾಜ್ (ಹೆಗ್ಗಡದೇವನ ಕೋಟೆ).— ಮಾನ್ಯ ಅಧ್ಯಕ್ಷರೇ, ೧೨ನೇ ತಾರೀಖಿನ ಸಂಯುಕ್ತ ಕರ್ನಾಟಕದಲ್ಲಿ ನೀರಾವರಿ ಬೋರ್ಡಿನ ಅಧ್ಯಕ್ಷರು ಒಂದು ಆರ್ಟಿಕಲ್ ಅನ್ನು ಬರೆದಿದ್ದಾರೆ. ಇವತ್ತು, ನಮ್ಮ ಜಿಲ್ಲೆಯ ಸಾರ್ವತ್ರಿಕರು, ವಿಜ್ಞಾನಿಗಳು ಎಲ್ಲ ಸೇರಿ ಬೇಡ್ತಿ ಯೋಜನೆ ಬೇಡವೆಂದು ಸಾಕಷ್ಟು ಪ್ರೊಟೆಸ್ಟ್ ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಸರ್ಕಾರ ಒಂದು ಸಮಿತಿಯನ್ನು ರಚನೆ ಮಾಡಿ ಪರಿಶೀಲನೆ ಮಾಡಿರುವಾಗ ಅದರ ವಿರುದ್ಧವಾಗಿ ಇವರು ಆರ್ಟಿಕಲ್ ಅನ್ನು ಬರೆದು, ಇವರಿಗೆ ರಾಷ್ಟ್ರೀಯ ದೃಷ್ಟಿ ಮತ್ತು ಯಾವ ಒಂದು ಜ್ಞಾನವೂ ಇಲ್ಲವೆಂದು ಹೇಳಿದ್ದಾರೆ. ಆದರೆ ರಾಷ್ಟ್ರೀಯ ದೃಷ್ಟಿಯನ್ನಿಟ್ಟುಕೊಂಡೇ ಬೇಡ್ತಿ ಯೋಜನೆ ಬೇಡವೆಂದು ಹೇಳುತ್ತಿದ್ದೇವೆ. ಆ ಒಂದು ಜ್ಞಾನ ಇಲ್ಲದೆ ಜಿಲ್ಲೆಯ ಜನ ಈ ಮಾತನ್ನು ಹೇಳುತ್ತಿಲ್ಲ ಕಾಡನ್ನು ರಕ್ಷಿಸಬೇಕೆಂಬುದು ಸರ್ಕಾರದ ನೀತಿ. ಹೀಗಿರುವಾಗ, ಈಗಾಗಲೇ ಈ ಜಿಲ್ಲೆಯಲ್ಲಿ ಎರಡು ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ. ಹಾಲಿ ಎರಡು ಯೋಜನೆಗಳಿದ್ದೂ, ಸಾಕಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿದ್ದೂ ಮೊರನೇ ಯೋಜನೆಯನ್ನು ತೆಗೆದು ಕೊಳ್ಳುವುದು ಸೂಕ್ತವಲ್ಲ. ಬೇಡ್ತಿ ಯೋಜನೆಯನ್ನು ಮಾಡದೆ ಇರುವುದಕ್ಕೆ ಏನು ಬೇಕಾದರೂ ತ್ಯಾಗ ಮಾಡುವುದಕ್ಕೆ ತಯಾರಿದ್ದೇವೆಂದು ಅಲ್ಲಿನ ಜನರು ಪ್ರೊಟೆಸ್ಟ್ ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ, ಒಂದು ಜವಾಬ್ದಾರಿಯ ಸ್ಥಾನದಲ್ಲಿರುವ ಅಧ್ಯಕ್ಷರು ಪತ್ರಿಕೆಗೆ ಲೇಖನ ಬರೆದು ಸರ್ಕಾರಕ್ಕೆ ಇನ್ನೂ ಸಪೋರ್ಟ್ ಕೊಟ್ಟು ಆ ಯೋಜನೆಯನ್ನು ಕೈಗೊಳ್ಳಲಿ ಎಂಬ ರೀತಿಯಲ್ಲಿ ಹೇಳಿದ್ದಾರೆ. ಇದನ್ನು ನಾವು ಖಂಡಿಸಿ ಈ ಲೇಖನಕ್ಕೆ ಉತ್ತೇಜನ ಕೊಡಬಾರದೆಂದೂ ಮತ್ತು ಸರ್ಕಾರದವರು ಇದನ್ನು ಗಣನೆಗೆ ತೆಗೆದುಕೊಳ್ಳಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್ ಎಲ್. ತಿಮ್ಮೇಗೌಡ (ಬಸವನಗುಡಿ ಕ್ಷೇತ್ರ).— ಮಾನ್ಯ ಅಧ್ಯಕ್ಷರೇ, ಶ್ರೀಪತಿ ಶರ್ಮರವರು ಇರೀಗೇಷನ್ ಆಡ್ವೈಸರಿ ಬೋರ್ಡ್ ಅಧ್ಯಕ್ಷರು ಪತ್ರಿಕೆಯಲ್ಲಿ ಕೊಟ್ಟಿರುವ ಲೇಖನದ ಬಗ್ಗೆ ಈಗಾಗಲೇ ತಮ್ಮ ವಿಚಾರವನ್ನು ಹೇಳಿದ್ದಾರೆ. ಬಹುಶಃ ಈ ಒಂದು ನೋಟೀಸಿಗೆ ರುಜು ಮಾಡಿರ ತಕ್ಕವರ ಪೈಕಿ ಹೆಚ್ಚಾಗಿ ಬೋರ್ಡಿನ ಅಧ್ಯಕ್ಷರ ಪರಿಚಯಸ್ಥ ಎಂದರೆ ನಾನೇ. ಅವರು ನಮ್ಮ ಪಕ್ಕದ ತಾಲ್ಲೂಕಿನವರು. ನಾನು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುತ್ತಿದ್ದಾಗ ಅವರು ಎಂತಹ ವ್ಯಕ್ತಿಗಳು ಎಂಬುದನ್ನು ಹೇಳಿದ್ದೇನೆ. ಒಂದೇ ಒಂದು ಶೋಚನೀಯವಾದ ವಿಚಾರವೆಂದರೆ, ನಮ್ಮ ರಾಜ್ಯದ ಒಬ್ಬ ಲೋಕಸಭಾ ಸದಸ್ಯರು ಉಪವಾಸ ಮಾಡುತ್ತಾರೆಂದು ಹೇಳಿಕೆ ಕೊಟ್ಟಮೇಲೆ ಸರ್ಕಾರದವರು ಒಂದು ಕಮಿಟಿಯನ್ನು ಮಾಡಿ ಈ ವಿಚಾರವನ್ನು ಕಮಿಟಿಯ ತೀರ್ಮಾನಕ್ಕೆ ಬಿಟ್ಟು ಅದರ ವರದಿ ಬರುವವರೆಗೆ ಇದನ್ನು ತಡೆದಿರುವಾಗ ಅಧ್ಯಕ್ಷರಿಗೆ ಹೇಳಿಕೆ ಕೊಡಬೇಕಾದ ಅವಶ್ಯಕತೆ ಇದ್ದರೆ ಆ ಸಮಿತಿಯು ಮುಂದೆ ಹೇಳಬಹುದಾಗಿತ್ತು. ಅದನ್ನು ಬಿಟ್ಟು ಸಾರ್ವಜನಿಕವಾಗಿ ಹೇಳಿಕೆ ಕೊಟ್ಟು ಪತ್ರಿಕೆಗೆ ಲೇಖನ ಬರೆದು ಜಿಲ್ಲೆಯ ಜನತೆಯ ಮನಸ್ಸಿನಲ್ಲಿ ಈ ಬಗ್ಗೆ ಹೇಯ ಭಾವನೆ ಬರುವಂತೆ ಮಾಡಿರುವುದು ಬಹಳ

ಖಂಡನೀಯವಾದ ವಿಚಾರ. ಇಂಥವರಿಗೆ ನಮ್ಮ ಸರ್ಕಾರದವರು ಅವಕಾಶ ಕೊಟ್ಟಿರತಕ್ಕದ್ದು ಬಹಳ ಶೋಚನೀಯವಾದ ವಿಚಾರವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರ ಸ್ವಭಾವ ಯಾವಾಗಲೂ ಅದೇ ರೀತಿಯದು ಎಂಬುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಮಂಗಳೂರು ಪೋರ್ಟ್ ಪೌಂಡೇಷನ್ ಹಾಕಿದ ಮೇಲೆ ಹಾರಂಗಿ ಯೋಜನೆಯ ಪೌಂಡೇಷನ್ ಅನ್ನು ಶ್ರೀಮಾನ್ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಹಾಕಬೇಕೆಂದು ತೀರ್ಮಾನವಾಗಿತ್ತು. ಆ ಸಂದರ್ಭದಲ್ಲಿ, ಈ ಅಧ್ಯಕ್ಷರು ಒಂದು ಪತ್ರ ಬರೆದು ಸರ್ಕಾರದವರು ಏನು ಸೂಚನೆ ಮಾಡಿದ್ದಾರೆ ಅದನ್ನು ನಾನು ವಿರೋಧ ಮಾಡುತ್ತೇನೆಂದು ಹೇಳಿದರು. ಇದನ್ನು ಮಾಡಿದರೆ ಹಾಗೆ ಆಗುತ್ತದೆ, ಹೀಗೆ ಆಗುತ್ತದೆಂದು ಏನೆಲ್ಲ ಹೇಳಿ ಹಾರಂಗಿ ಯೋಜನೆಗೆ ಪೌಂಡೇಷನ್ ಹಾಕಕೂಡದೆಂದು ತಕರಾರು ಕಳುಹಿಸಿದರು. ಅಮೇಲೆ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಅದರ ತೀರ್ಮಾನವಾಗುವ ವರೆಗೆ ಪೌಂಡೇಷನ್ ಹಾಕುವುದಿಲ್ಲವೆಂದರು. ಕೊನೆಗೆ ಇರಿಗೇಷನ್ ಮಂತ್ರಿಗಳು ಆ ಏರಿಯಾವನ್ನು ಸರ್ವೆ ಮಾಡಿ ಸರ್ಕಾರದವರು ಏನು ತೀರ್ಮಾನ ಕೊಟ್ಟಿದ್ದಾರೆ ಆ ಪ್ರಕಾರ ಅಲ್ಲಿ ಪೌಂಡೇಷನ್ ಹಾಕುವುದು ನ್ಯಾಯವಾದುದೆಂದು ಹೇಳಿದರು. ಅಮೇಲೆ, ಲಾಲ್‌ಬಹದ್ದೂರ್ ಶಾಸ್ತ್ರಿಯವರು ಮೊದಲು ಪೌಂಡೇಷನ್ (ಹಾಕಬೇಕಾದ ಸಮಯಕ್ಕೂ ಮತ್ತು ಇನ್ನೊಂದು ಸಾರಿ ಶ್ರೀಮಾನ್ ನಿಜಲಿಂಗಪ್ಪನವರು ಪೌಂಡೇಷನ್ ಹಾಕಿದ್ದಕ್ಕೂ ಸುಮಾರು ೩ ವರ್ಷ ವಾಯಿತು. ಮೂರು ವರ್ಷಗಳ ಹಿಂದೆ ಪೌಂಡೇಷನ್ ಹಾಕಿದ್ದರೆ ತುಂಬ ಅನುಕೂಲವಾಗುತ್ತಿತ್ತು ಹೇಗೆಂದರೆ, ಕೇವಲ ೨-೩ ತಿಂಗಳಲ್ಲೇ ಲಾಲ್ ಬಹದ್ದೂರ್ ಶಾಸ್ತ್ರಿಯವರು ರಾಷ್ಟ್ರದ ಪ್ರಧಾನ ಮಂತ್ರಿಗಳಾದರು. ಆಗ ಹೆಚ್ಚಿನ ಹಣಕಾಸಿನ ಸಹಾಯವನ್ನು ನಮ್ಮ ರಾಜ್ಯಕ್ಕೆ ಬಂದು ಈ ಹಾರಂಗಿ ಯೋಜನೆ ಪೂರ್ಣಗೊಂಡು ಅವತ್ತಿನಿಂದಲೇ ಸುಮಾರು ಒಂದು ಲಕ್ಷ ಎಕರೆ ಜಮೀನಿಗೆ ನೀರಾವರಿಯಾಗಿ ಜನಗಳಿಗೆ ಅನುಕೂಲವಾಗುತ್ತಿತ್ತು. ಜೊತೆಗೆ ಹಣ ಕೂಡ ಉಳಿತಾಯವಾಗುತ್ತಿತ್ತು. ಮೂರು ವರ್ಷಕ್ಕೆ ಎಷ್ಟು ಹಣವನ್ನು ಹೆಚ್ಚಾಗಿ ಖರ್ಚು ಮಾಡಬೇಕಾಗುತ್ತದೆಂಬುದನ್ನು ನಾವೇ ಊಹಿಸಬಹುದು. ಇಂಥವರನ್ನು ನಮ್ಮ ರಾಜ್ಯದ ಇರಿಗೇಷನ್ ಅಡ್ವೈಸರಿ ಬೋರ್ಡಿನ ಅಧ್ಯಕ್ಷರನ್ನಾಗಿ ಸರ್ಕಾರ ಮಾಡಿದೆ. ಅವರು ವಿವಾದಾಸ್ಪದವಾದ ವಿಚಾರದಲ್ಲಿ ಅನವಶ್ಯಕವಾದ ಒಂದು ಹೇಳಿಕೆಯನ್ನು ಕೊಟ್ಟು ಸರ್ಕಾರವನ್ನು ಪೇಚಿಗೆ ಸಿಕ್ಕಿಸಿರುವುದು ದುರಾದೃಷ್ಟ. ಇನ್ನು ಮುಂದಾದರೂ ಇಂಥ ವ್ಯಕ್ತಿಗಳ ಬಗ್ಗೆ ಸರ್ಕಾರ ಹುಷಾರಾಗಿರಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾವೇರಿ ವಿಚಾರದಲ್ಲಿ ಕೂಡ ಹುಷಾರಾಗಿರಬೇಕಾಗುತ್ತದೆ. ಅವರು ಕಾವೇರಿ ವಿಚಾರದಲ್ಲಿ ಸಹ ಈ ಸದನದಲ್ಲಿ ಮಾಡಿರತಕ್ಕ ಭಾಷಣಗಳನ್ನು ನೋಡಿದರೆ ಒಂದು ದಿವಸ ಒಂದು ರೀತಿ ಇನ್ನೊಂದು ದಿವಸ ಇನ್ನೊಂದು ರೀತಿ ಮಾತನಾಡಿದ್ದಾರೆ. ಇಂಥವರ ಬಗ್ಗೆ ಬಹಳ ಹುಷಾರಾಗಿರಬೇಕು. ಉತ್ತರ ಕನ್ನಡ ಜಿಲ್ಲೆಯ ಜನರಿಗೂ ಮತ್ತು ಸರ್ಕಾರ ಕ್ಕೂ ಒಪ್ಪಂದವಾಗಿ ಸರ್ಕಾರ ಏನು ಒಂದು ಸಮಿತಿಯನ್ನು ಮಾಡಿದೆ ಅದರ ತೀರ್ಮಾನಕ್ಕೆ ಯಾರು ಬಹಿರಂಗವಾಗಿ ಹೇಳಿಕೆ ಕೊಡತಕ್ಕದ್ದಾಗಲೀ ಲೇಖನ ಬರೆಯತಕ್ಕದ್ದಾಗಲೀ ತಪ್ಪಿತಸ್ಥ ಕೆಲಸವೆಂದು ಮಾನ್ಯ ಮಂತ್ರಿಗಳು ಮತ್ತು ಸರ್ಕಾರದವರು ಒಂದು ತೀರ್ಮಾನ ತೆಗೆದುಕೊಂಡು ಹೇಳಬೇಕಾಗಿದೆ. ಶ್ರೀವಂತಿ ಶರ್ವರವರು ಹೇಳಿದ ಹಾಗೆ ಅವರನ್ನು ಡಿಸ್‌ಮಿಸ್ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಆದರೂ ಕೂಡ ಅವರ ಮೇಲೆ ಹತೋಟಿ ಇಟ್ಟುಕೊಳ್ಳುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಂಗಿಸುತ್ತೇನೆ.

11-00 A.M.

SRI A. LAKSHMISAGAR (Chickpet).—I have a submission to make. The Government, after knowing the minds of the people thought it fit to appoint an Expert Committee to go into the question of execution or otherwise of the Bedthi Project. Now, the Committee is seized of the matter. Any person who is interested in making any representation to this Committee for or against the execution of the Bedthi Project, is at liberty to do so and apprise the Expert Committee by taking a decision one way or the other on merits. The Committee is going into this matter. Now, in a contest like this, a person, who enjoys the status of a Cabinet Minister should not publicly express

the opinion in one way or the other. He may be an intelligent person. I give him all the credit, honour and dignity that must be due to a person who in the opinion of the Government finds a place of honour to advice the Government. Well, that is one aspect of the matter. But, he should not go out of the way and make public statements which would prejudice the Members of the Expert Committee in taking a decision in an objective fashion. The responsibility of the Government is also there. They cannot simply give an evasive answer on this question. He must be asked to shut his mouth. Let the Expert Committee go into this matter. He is at liberty to make representations either for or against it; nothing prevents him in his way. But, he has no business to utter statements in public one way or the other either for or against it. This is my submission. In this behalf, it is the responsibility of the Government to say in the blunt language that he should act within his limitations.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ಶ್ರೀಮತಿ ಗಜಾನನ ಶರ್ಮ ಅವರು ಹೇಳಿದ ಮಾತು ಗಳನ್ನು ಬೆಂಬಲಿಸುತ್ತಾ, ನೀರಾವರಿ ಮಂಡಲಿಯ ಅಧ್ಯಕ್ಷರು ನೀಡಿರುವ ಹೇಳಿಕೆ ಔಚಿತ್ಯದಿಂದ ಕೂಡಿಲ್ಲ ವೆಂದು ಎಲ್ಲರೂ ಒಪ್ಪತಕ್ಕದ್ದಾಗಿದೆ ಎಂದು ಹೇಳುತ್ತೇನೆ. ಅವರು ಯಾವುದರಲ್ಲಿ ತಜ್ಞರೆಂದು ನನಗೆ ಗೊತ್ತಾಗುತ್ತಿಲ್ಲ. ಈ ಬಗ್ಗೆ ಮಾತನಾಡಬೇಕಾದರೆ ಒಬ್ಬ ತಜ್ಞನಾಗಿ ಮಾತನಾಡಬೇಕೇ ಹೊರತು ನಾನೊಬ್ಬ ಮಂಡಲಿಯ ಅಧ್ಯಕ್ಷ ಮತ್ತು ಹಿಂದೆ ನಾನು ರಾಜ್ಯದಲ್ಲಿ ಮಂತ್ರಿಯಾಗಿದ್ದೆ ಎನ್ನುವ ದೃಷ್ಟಿ ಇಟ್ಟುಕೊಂಡು ಮಾತನಾಡುವುದು ಸರಿಹೋಗುವುದಿಲ್ಲ. ನನ್ನನ್ನು ಕೇಳಿದರೆ, ಇಂತಹವರನ್ನು ಮಂಡಲಿಯ ಅಧ್ಯಕ್ಷರನ್ನಾಗಿಯೇ ನೇಮಕ ಮಾಡಬಾರದು. ನಿವೃತ್ತ ರಾಜಕಾರಣಿ, ಆದರಲ್ಲೂ ಸೋಲಿ ಸಲ್ಪಟ್ಟ ರಾಜಕಾರಣಿಯನ್ನು ಅಧ್ಯಕ್ಷರನ್ನಾಗಿ ಮಾಡಬಾರದಾಗಿತ್ತು. especially retired politicians ಮಾಡಿದರೆ ಈ ರೀತಿ ಅನಾಹುತವಾಗುತ್ತದೆ.

MR. SPEAKER.—A politician will never retire. Even I do not retire and nobody retires.

SRI S.R. BOMMAI.—For such politicians the only thing is compulsory retirement.

ಶ್ರೀ ಪಿ. ರಾಮದೇವ್.—ಸರ್ಕಾರದವರು ಅವರಿಗೆ ಬುದ್ಧಿ ಹೇಳಿ, ಮುಂದೆ ಈ ರೀತಿ ಮಾಡಬಾರ ದೆಂದು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಚನ್ನಬಸಪ್ಪನವರು ಮಾಡಿರತಕ್ಕ ಹೇಳಿಕೆ ಒಂದು ದೃಷ್ಟಿಯಿಂದ ವಿಷಾದಕರವಾಗಿದೆ. ಅವರು ತಜ್ಞರಿದ್ದಾರೆ. ಅನುಭವಿಗಳಿದ್ದಾರೆ. ಆ ಅನುಭವ ವನ್ನು ಆಂಕಿ-ಅಂಶಗಳ ಆಧಾರದ ಮೇಲೆ ಅವರು ಸಮಿತಿ ಮುಂದೆ ಇಡಬೇಕಾಗಿತ್ತು. ಇಡೀ ಜಿಲ್ಲೆಯಲ್ಲಿ ಹೋರಾಟ ಮಾಡುತ್ತಿರುವವರಿಗೆ ರಾಷ್ಟ್ರೀಯ ಭಾವನೆ ಇಲ್ಲ, ರಾಷ್ಟ್ರದ ಬಗ್ಗೆ ಅಭಿಮಾನವಿಲ್ಲವೆಂದು ದೋಷಾರೋಪಣೆ ಮಾಡುವುದು ಅವರ ವಯಸ್ಸಿಗೆ ಮತ್ತು ಯೋಗ್ಯತೆಗೆ ಒಪ್ಪುವ ಮಾತಲ್ಲ.

ಅಧ್ಯಕ್ಷರು —ತಾವೂ ಕೂಡ ಈ ರೀತಿ ಭಾಷೆ ಬಳಸಿದರೆ ಹೇಗೆ ?

ಶ್ರೀ ಹೆಚ್. ಗಂಗಾಧರನ್.—ಅವರ ಮಟ್ಟವನ್ನು ಹೇಳುತ್ತಿದ್ದೇನೆ. ಅವರ ಅನುಭವಕ್ಕೆ ಇದು ಸರಿದೂಗುವಂತಹದಲ್ಲ. ಶಬ್ದ ಬೇಕಾದರೆ ಬದಲಾವಣೆ ಮಾಡಿಕೊಳ್ಳುತ್ತೇನೆ. ಆದರೆ, ...

ಅಧ್ಯಕ್ಷರು.—ಶಬ್ದ ಪಲ್ಲವಿ ನಮ್ಮ ಭಾವನೆಯನ್ನು ತಿಳಿಸುವುದು ?

ಶ್ರೀ ಹೆಚ್. ಗಂಗಾಧರನ್.—ಒಬ್ಬ ವ್ಯಕ್ತಿ ತನ್ನ ಅಭಿರುಚಿಯನ್ನು ವ್ಯಕ್ತಪಡಿಸುವಾಗ ಒಂದು ಜಿಲ್ಲೆಯ ಲಕ್ಷಾಂತರ ಜನರ ಮನಸ್ಸಿನ ಮೇಲೆ ದುಷ್ಪರಿಣಾಮವನ್ನುಂಟು ಮಾಡುವಂಥ ಹೇಳಿಕೆ ಕೊಟ್ಟಿ

ದ್ದಾರೆ. ಇದರ ಬಗ್ಗೆ ನಾವು ಗಮನ ಹರಿಸಬೇಕಾಗಿದೆ. ಇದರಲ್ಲಿ ನಾನೇ ಪರಿಣತ ಎಂಬ ಅಹಂಭಾವನೆಯೂ ವ್ಯಕ್ತವಾಗುತ್ತಿದೆ. ಒಬ್ಬ ತಜ್ಞರ ಅಭಿಪ್ರಾಯದಲ್ಲಿ ದೋಷವಿದ್ದರೆ ಅದನ್ನು ತಿದ್ದಿವ ತಜ್ಞರಿದ್ದಾರೆ. ಆದರೆ, ಈ ಮಹನೀಯರನ್ನು ತಜ್ಞರೆಂದು ಯಾವ ದೇಶವೂ ಒಪ್ಪಿಲ್ಲ ಅಥವಾ ಯಾವ ರಾಜ್ಯವೂ ಒಪ್ಪಿಲ್ಲವೆಂದು ನನ್ನ ಭಾವನೆ. ದುರ್ದೈವದಿಂದ ಮಾನ್ಯ ಮುಖ್ಯ ಮಂತ್ರಿಗಳು ಪೃದ್ಧಾಪ್ಯ ನೇತನ ಕೊಟ್ಟ ಹಾಗೆ ಅವರಿಗೊಂದು ಅವಕಾಶವನ್ನು ಕಲ್ಪಿಸಿಕೊಟ್ಟಿರುವಾಗ ಅದನ್ನವರು ದುರುಪ ಯೋಗ ಮಾಡಿಕೊಂಡಿದ್ದಾರೆನ್ನುವ ಮಾತನ್ನು ಹೇಳದೆ ವಿಧಿ ಇಲ್ಲ. ಈ ಮಾತನ್ನು ಹೇಳುವಾಗ ಇದಕ್ಕೆ ಹಿನ್ನಲೆ ಇದೆ ಎಂದು ನಾನು ಭಾವಿಸಿದ್ದೇನೆ. ಮೈಸೂರು ಜಿಲ್ಲೆಯಲ್ಲಿ.....

MR. SPEAKER.—We are not concerned about it.

ಶ್ರೀ ಹೆಚ್. ಗಂಗಾಧರನ್.—ಏತಕ್ಕೆ ಹೇಳುತ್ತಿದ್ದೇನೆಂದರೆ, ಅವರ ತಜ್ಞತೆ ಬಗ್ಗೆ.....

ಅಧ್ಯಕ್ಷರು.—ನಿಯಮ ೩೧೨ರ ಪ್ರಕಾರ ಕೊಟ್ಟಿರುವ ಸೂಚನೆಯಲ್ಲಿ ಅಡಕವಾಗಿರುವ ವಿಚಾರ, ಪತ್ರಿಕೆಯಲ್ಲಿ ಬಂದಿರತಕ್ಕ ಹೇಳಿಕೆ ಮತ್ತು ತಾವೇನಾದರೂ ಅದನ್ನು ಸಮರ್ಥನೆ ಮಾಡಿಕೊಳ್ಳುವುದಿದ್ದರೆ, ಆ ವಿಚಾರ-ಅಷ್ಟಕ್ಕೆ ಮಾತ್ರ ಸೀಮಿತವಾಗಿ ಮಾತನಾಡಿ.

ಶ್ರೀ ಹೆಚ್. ಗಂಗಾಧರನ್.—ಒಂದು ಜಿಲ್ಲೆಯ ಜನರಿಗೆ ರಾಷ್ಟ್ರೀಯ ಭಾವನೆ ಇಲ್ಲವೆಂದು ಹೇಳುವ ವ್ಯಕ್ತಿ ತಾನು ಹುಟ್ಟಿದ ಜಿಲ್ಲೆಯ ಬಗ್ಗೆ ರಾಷ್ಟ್ರೀಯ ಭಾವನೆಯನ್ನು ತೋರಿಸದೆ ಮೂರು ಕೋಟಿ ರೂಪಾಯಿ ವೆಚ್ಚದ ಕಬಿನಿ ಯೋಜನೆ ಹತ್ತು ವರ್ಷಗಳಾದರೂ ಮುಗಿಯಲು ಬಿಡದೆ, ತಮ್ಮ ಬಂಧುಗಳ ಊರು ಮುಳುಗಿ ಹೋಗುತ್ತದೆನ್ನುವ ಕಾರಣದಿಂದ ಸ್ವಾರ್ಥ ಸಾಧನೆಗಾಗಿ ಯೋಜನೆಯನ್ನೇ ಮಾರ್ಪಾಡು ಮಾಡಿ, ಅಲ್ಲಿನ ಬಹು ಜನರ ಜೀವನ ದುಸ್ತರವಾಗಲು ಕಾರಣಕರ್ತರಾದ ಈ ವ್ಯಕ್ತಿ ಒಂದು ಜಿಲ್ಲೆಯ ಜನರಿಗೆ ರಾಷ್ಟ್ರೀಯ ಭಾವನೆ ಇಲ್ಲವೆಂದು ಹೇಳುವುದು ಆಶ್ಚರ್ಯಕರವಾಗಿದೆ. ಇಂತಹ ವ್ಯಕ್ತಿಯನ್ನು ನಮ್ಮ ದೇಶದಲ್ಲಿ ಇಟ್ಟುಕೊಂಡರೆ ಅಥವಾ ಅವರಿಗೆ ಅವಕಾಶ ಕೊಟ್ಟರೆ ಇನ್ನಾವ ಯೋಜನೆಗಳನ್ನು ಹಾಕಿಕೊಂಡರೂ ಈ ದೇಶ ಮುಂದುವರಿಯಲಾರದೆಂದು ಹೇಳಬಯಸುತ್ತೇನೆ. ಅವರ ಅಧಿಕಾರಾವಧಿಯನ್ನು ಅವಲೋಕಿನ ಮಾಡಿದಾಗ, ಅವರು ದೇಶದಲ್ಲಿ ಸಮಸ್ಯೆಗಳನ್ನು ಬಗೆಹರಿಸುವುದಕ್ಕಿಂತ ಹೆಚ್ಚಿಗೆ ಸಮಸ್ಯೆಗಳನ್ನು ಉದ್ಭವಿಸುವುದಕ್ಕೆ ಮತ್ತು ಸಮಸ್ಯಾ ಪ್ರಸಂಗಗಳು ಬರುವುದಕ್ಕೆ ಕಾರಣ ಕರ್ತರಾಗಿದ್ದರು. ಅದಕ್ಕೆ ಕಂಬದಕಡ ಯೋಜನೆ ಸಾಕ್ಷಿಯಾಗಿದೆ. ಈ ಯೋಜನೆಯನ್ನು ಸಮಸ್ಯಾಮಯ ಮಾಡಿದ ವ್ಯಕ್ತಿ ಇಲ್ಲೂ ಕೂಡ ಸಮಸ್ಯೆಯ ರೂಪಗಳನ್ನೇ ತಂದೊಡ್ಡುವ ಹಾಗೆ ಕಾಣುತ್ತಿದ್ದಾರೆ ಅದಕ್ಕಾಗಿ ಅವರು ಈ ಜಿಲ್ಲಾ ಜನರ ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಸರ್ಕಾರ ಗಮನ ಹರಿಸಿ, ಇಂತಹ ಅನುಚಿತ ಹೇಳಿಕೆಗಳನ್ನು ಕೊಡದಂತೆ ಎಚ್ಚರಿಕೆ ಕೊಡಬೇಕೆಂದು ಸೂಚಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಅರ್ಥ ಸಚಿವರು).—ಮಾನ್ಯ ಅಧ್ಯಕ್ಷರೇ, ಶ್ರೀಮತಿ ಗಜಾನನ ಶರ್ಮ, ಶ್ರೀಮತಿ ಸುಶೀಲ ಚೆಲುವರಾಜ್, ಶ್ರೀ ಗಂಗಾಧರನ್, ಶ್ರೀ ಲಕ್ಷ್ಮೀಸಾಗರ್ ಹಾಗೂ ಇನ್ನು ಕೆಲವು ಮಾನ್ಯ ಸದಸ್ಯರು,ಶ್ರೀಮಾನ್ ಚನ್ನಬಸಪ್ಪನವರು ಕೊಟ್ಟಂಥ ಪತ್ರಿಕಾ ಹೇಳಿಕೆ ಮೇಲೆ ಈ ವಿಚಾರವನ್ನು ಎತ್ತಿದ್ದಾರೆ.

ಶ್ರೀ ಪಿ. ರಾಮದೇವ್.—ಪತ್ರಿಕಾ ಹೇಳಿಕೆಯಲ್ಲ, ಲೇಖನ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಚನ್ನಬಸಪ್ಪನವರು ಬೇಡ್ತಿ ಯೋಜನೆ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದಾರೆ. ರಾಷ್ಟ್ರೀಯ ದೃಷ್ಟಿಯಿಂದ ಮತ್ತು ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಬೇಡ್ತಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಹೇಳುವ ವಿಚಾರದ ಮಧ್ಯೆ ಕೆಲವು ಜಿಜ್ಞಾಸೆಗಳನ್ನು ಅವರು ಎತ್ತಿದ್ದಾರೆಂದು ಮಾನ್ಯ ಸದಸ್ಯರು ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರು ಏನು ಅಭಿಪ್ರಾಯ ಪಟ್ಟಿದ್ದಾರೆ, ಅದು ಸರ್ಕಾರದ ಅಧಿಕೃತ ಅಭಿಪ್ರಾಯವಲ್ಲ. ಸರ್ಕಾರ ಅಥವಾ ತಜ್ಞರು ಏನು ನಿರ್ಧಾರ ಮಾಡಬೇಕೆಂದು ಹೊರಟಿದ್ದಾರೆ ಅದರ ಮೇಲೆ ಇವರ ಅಭಿಪ್ರಾಯ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಅದು ಅವರ ವೈಯಕ್ತಿಕ ಅನಿಸಿಕೆ, ಯಾವಾಗಲೂ ಎರಡು ವಾದ ಇದ್ದೇ ಇರುತ್ತದೆ. ನಾವು ತಜ್ಞರ ಸಮಿತಿಯನ್ನು ಏತಕ್ಕೆ ರಚಿಸಿದ್ದೇವೆ ? ಬೇಡ್ತಿ ಯೋಜನೆಗೆ ಯೋಜನಾ ಆಯೋಗ ಕೂಡ ಕ್ಲಿಯರೆನ್ಸ್ ಕೊಟ್ಟಿದೆ. ಅಲ್ಲದೆ, ಅದರಲ್ಲಿ ಐದು ಕೋಟಿ ರೂಪಾಯಿಗಳು ಈಗಾಗಲೇ ಖರ್ಚಾಗಿದೆ. ಯೋಜನೆಯಲ್ಲಿ ಬಹಳ ದೂರ ಹೋಗಿದ್ದೇವೆ. ಆಮೇಲೆ

ಉತ್ತರ ಕರ್ನಾಟಕದ ಜನತೆ ಅದರಲ್ಲೂ ಪ್ರಾಮುಖ್ಯವಾಗಿ ಶ್ರೀಮತಿ ಅನಸೂಯ ಗಜಾನನ ಶರ್ಮ ಅವರ ಮುಂದಿಂದತ್ವದಲ್ಲಿ ಚಳವಳಿ ಕೂಡ ಹೂಡಿದ್ದಾರೆ ಚಳವಳಿ ಮಾಡಿದಾಗ ಈ ಯೋಜನೆಯ ವಿಚಾರದಲ್ಲಿ ಸರ್ಕಾರ ತಕ್ಷಣ ಒಂದು ತಜ್ಞರ ಸಮಿತಿಯನ್ನೂ ಕೂಡ ನೇಮಕ ಮಾಡಿದೆ. ಈ ಸಮಿತಿಯ ಅಧ್ಯಕ್ಷರು ಶ್ರೀ ಹೆಚ್. ವಿ. ನಾರಾಯಣ್ ರಾವ್ ಅವರು ಹಿರಿಯರು ಮತ್ತು ಹಿಂದೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಮುಖ್ಯ ಇಂಜಿನಿಯರ್ ಆಗಿದ್ದವರು. ಇವರಲ್ಲದೆ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದ ಶ್ರೀ ಮಾವಿನಕುರ್ವೆ, ನೀರಾವರಿ ಇಲಾಖೆಯ ವಿಶೇಷ ಕಾರ್ಯದರ್ಶಿಯಾಗಿದ್ದ ಶ್ರೀ ಬಿ.ಸಿ. ಅಂಗಡಿಯವರು ಸದಸ್ಯರಾಗಿದ್ದಾರೆ. ಶ್ರೀ ಬಿ.ಸಿ. ಅಂಗಡಿಯವರ ವಿಚಾರ ತಮಗೆಲ್ಲರಿಗೂ ಗೊತ್ತೇ ಇದೆ. ಇವರುಗಳು ತಮ್ಮ ಸೇವಾವಧಿಯಲ್ಲಿ ಪ್ರಶ್ನಾತೀತವಾದ ಚಾರಿತ್ರ್ಯ ಮತ್ತು ದಕ್ಷತೆಯನ್ನು ತೋರಿಸಿದ ಜನ. ಇವರಲ್ಲದೆ, Sri M.A. Parthasarathy, Ecologist, a person who has studied about environment andSri K.C.Reddy,Managing Director, Power Corporation ... ಇವರುಗಳೂ ಸದಸ್ಯರಾಗಿದ್ದಾರೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಈ ಸಮಿತಿಯು ಇನ್ನೂ ಬಲಯುತವಾಗಿ ಕಾರ್ಯ ಮಾಡಬೇಕೆಂದು ಸೂಚನೆ ಕೊಟ್ಟಾಗ, ಪುನಃ ಈ ಸಮಿತಿಗೆ ಇನ್ನೊಬ್ಬ Ecologist ಪ್ರೊ: ಸಿ. ಜೆ. ಸಲ್ಡಾನ ಅವರನ್ನು ಸದಸ್ಯರನ್ನಾಗಿ ನೇಮಿಸಲಾಯಿತು. ಏಕೆಂದರೆ, ಸರ್ಕಾರ.....

ಶ್ರೀಮತಿ ಅನಸೂಯ ಗಜಾನನ ಶರ್ಮ.—ಒಂದು ನಿಮಿಷ ಮಧ್ಯದಲ್ಲಿ ಹೇಳುತ್ತೇನೆ. ಶ್ರೀಮಾನ್ ಕೆ.ಸಿ. ರೆಡ್ಡಿಯವರು, ಹೆಚ್.ವಿ. ನಾರಾಯಣ್‌ರಾವ್ ಮತ್ತು ಬಿ.ಸಿ. ಅಂಗಡಿಯವರುಗಳು ಮೈಸೂರು ವಿದ್ಯುಚ್ಛಕ್ತಿ ಕಾರ್ಪೊರೇಷನ್ನಿನ ಡೈರೆಕ್ಟರುಗಳಾಗಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ. ಈಗ ನಾವು ಅವರ ಪ್ರಾಮಾಣಿಕತೆ ಬಗ್ಗೆ ಪ್ರಶ್ನೆ ಮಾಡಬಾರದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಅವರು ಮಾಡಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಪವರ್ ಕಾರ್ಪೊರೇಷನ್ನಿನಲ್ಲಿ ಡೈರೆಕ್ಟರುಗಳು ಆದ ಮಾತ್ರಕ್ಕೇ ಸರ್ಕಾರದ ಪರವಾಗಿ ಕೆಲಸ ಮಾಡಬೇಕು ಅಥವಾ ಸರ್ಕಾರದ...

ಶ್ರೀಮತಿ ಅನಸೂಯ ಗಜಾನನ ಶರ್ಮ.—ನಮ್ಮಂತಹವರನ್ನು ಹಾಕಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದರೆ, ಅದು ಬೇರೆ ವಿಚಾರ. ತಜ್ಞರ ಸಮಿತಿಗಳ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡುವುದಾದರೆ, ರಾಜ್ಯದ ಎಲ್ಲ ಯೋಜನೆಗಳಿಗೂ ಸದನದ ಸದಸ್ಯರನ್ನೊಳಗೊಂಡ ಸಮಿತಿಯನ್ನೇ ಮಾಡಿ... ಜಲವಿದ್ಯುತ್ ಯೋಜನೆಯನ್ನು ಮಾಡುವಾಗ ಅರಣ್ಯ ಇದ್ದೇ ಇರುತ್ತದೆ. ಅರಣ್ಯ.....

ಅಧ್ಯಕ್ಷರು —ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಅಲ್ಲಿಯವರು. ಅವರು ತಜ್ಞರನ್ನು ಬಲ್ಲರು. ಅಲ್ಲದೆ, ಅವರು ಸಲಹೆ ಮಾಡಿದ ಮೇಲೆ ಮತ್ತೊಬ್ಬ ತಜ್ಞರನ್ನು ಸಮಿತಿಗೆ ಸೇರಿಸಲಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಸಲಹೆ ಮಾಡಿದ ಮೇಲೆ ಶ್ರೀ ಸಲ್ಡಾನ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ —ನಾವು ಅವರ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡುವುದಿಲ್ಲ. ನಾವು ಪ್ರಶ್ನೆ ಮಾಡುತ್ತಿರುವುದು ನೀರಾವರಿ ಸಲಹಾ ಮಂಡಳಿಯ ಅಧ್ಯಕ್ಷರ ಹೇಳಿಕೆಯನ್ನು. ನಮಗೆ ಸರ್ಕಾರದ ನೀತಿ ಮತ್ತು ಉದ್ದೇಶದಲ್ಲಿ ಅನುಮಾನವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಜ್ಞರ ಸಮಿತಿಯನ್ನು ನಾವು ರಚಿಸಿದ್ದೇವೆ. ಆದರ ಜೊತೆಗೆ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಸಲಹೆ ಮಾಡಿದ ಮೇಲೆ ಪ್ರೊಫೆಸರ್ ಸಲ್ಡಾನ ಅವರನ್ನು ಕೂಡ ಸಮಿತಿಯಲ್ಲಿ ಸೇರಿಸಲಾಗಿದೆ. ಸ್ವಂತವಾಗಿ ಮತ್ತು ನಿಷ್ಪಕ್ಷಪಾತವಾಗಿ ಅಭಿಪ್ರಾಯ ಕೊಡುವ ತಜ್ಞರ ಸಮಿತಿ ಮೇಲೆ ಶ್ರೀ ಚನ್ನಬಸಪ್ಪನವರಾಗಲೀ ಅಥವಾ ನಾನಾಗಲೀ ಅಥವಾ ಯಾರೇ ಆಗಲಿ ಪ್ರಭಾವ ಬೀರುತ್ತಾರೆಂಬ ಭಯ ಅಥವಾ ಶಂಕೆ ಯಾರಿಗೂ ಇರಬೇಕಾಗಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು.—ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರೂ ಸ್ವಾಗತ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ —ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರೂ ಇದನ್ನು ಸ್ವಾಗತ ಮಾಡಿದ್ದಾರೆಂದರೆ ಶ್ರೀಮತಿ ಅನಸೂಯ ಗಜಾನನ ಶರ್ಮ ಅವರು ಇದನ್ನು ಸ್ವಾಗತ ಮಾಡಿದ್ದಾರೆಂದೇ ಅರ್ಥವಾಗುತ್ತದೆ. ಆದರಲ್ಲಿ ಯಾವ ಅನುಮಾನವೂ ಇಲ್ಲ. ತಜ್ಞರ ಸಮಿತಿ...

ಶ್ರೀಮತಿ ಅನಸೂಯ ಗಜಾನನ ಶರ್ಮ.—ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಸ್ವಾಗತ ಮಾಡಿದ್ದಾರೆ ಆದರೆ ಒಪ್ಪಿದ್ದಾರೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ.— ತಜ್ಞರ ಸಮಿತಿಯನ್ನು ನೇಮಕ ಮಾಡಿದ ಮೇಲೆ, ಒಬ್ಬರು ಒಂದು ಅಭಿಪ್ರಾಯ ಕೊಟ್ಟರೆ, ಇನ್ನೊಬ್ಬರು ಪುತ್ತೊಂದು ಅಭಿಪ್ರಾಯ ಕೊಟ್ಟರೆ ಅದು ಸಮಿತಿಯ ಮೇಲೆ ಯಾವ ಪ್ರಭಾವವು ಬೀರಲಾರದು. ತಜ್ಞರ ಅಭಿಪ್ರಾಯ ಬಂದ ಮೇಲೆ ಸರ್ಕಾರ ಅದರ ಬಗ್ಗೆ ಯುಕ್ತವಾದ ಕ್ರಮ ತೆಗೆದುಕೊಳ್ಳುತ್ತದೆ ಆದುದರಿಂದ, ಶ್ರೀಮಾನ್ ಚನ್ನಬಸಪ್ಪನವರಿಗಾಗಲೀ ಅಥವಾ ಇನ್ನೊಬ್ಬರಿಗಾಗಲೀ ಅಷ್ಟೊಂದು ಪ್ರಾಮುಖ್ಯತೆಯನ್ನು ಕೊಡಬೇಕಾದ ಅವಶ್ಯಕತೆ ಇಲ್ಲ. ಯಾರಾದರೂ ತಜ್ಞರ ಸಮಿತಿಗೆ ತಮ್ಮ ಅಭಿಪ್ರಾಯವನ್ನು ಕಳುಹಿಸಿಕೊಟ್ಟರೆ..

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಶ್ರೀಮಾನ್ ಚನ್ನಬಸಪ್ಪನವರು ಖಾಸಗಿ ಮನುಷ್ಯರಾಗಿದ್ದು ಅವರ ಹೇಳಿಕೆ ಪತ್ರಿಕೆಗಳಲ್ಲಿ ಬಂದಿದ್ದರೆ ಅದನ್ನು ನಾವು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಅವರಿಗೆ ಸರ್ಕಾರ ಮಂತ್ರಿ ಸ್ಥಾನದ ಪದವಿಯನ್ನು ಕೊಟ್ಟಿದೆ. ಅವರು ನೀರಾವರಿ ಮಂಡಲಿಯ ಸಲಹಾಗಾರರು. ಅವರು ಸಲಹಾಗಾರರಾಗಿದ್ದು ಈ ರೀತಿಯಾದ ಹೇಳಿಕೆಗಳನ್ನು ಕೊಡುವುದನ್ನು ಮಾತ್ರ ನಾವು ಪ್ರಶ್ನೆ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ಅವರ ವೈಯುಕ್ತಿಕ ಅನಿಸಿಕೆ. ನಾವು ಅದರ ಮೇಲೆ ಹೆಚ್ಚು ವಾದವನ್ನು ಬೆಳೆಸುವ ಅವಶ್ಯಕತೆ ಇಲ್ಲ. ಶ್ರೀಮಾನ್ ಚನ್ನಬಸಪ್ಪನವರು ಹಿರಿಯರು. ಹಿಂದೆ ಮಂತ್ರಿಗಳಾಗಿದ್ದವರು. ಈ ವಿಚಾರದಲ್ಲಿ ಅನುಭವ ಹೊಂದಿದವರು. ಕಾರಂಜಿಯಲ್ಲಿ ನೀರು ಜಾಸ್ತಿ ಯಾಗಿ ಒಮ್ಮೆಗೆ ಹೊರಕ್ಕೆ ಬರುವ ಹಾಗೆ. ಅವರ ಅನುಭವದ ಮಾತುಗಳು ಹೊರಬರುತ್ತಿವೆ, ಏನು ಮಾಡುವುದು ? ಅವರು ಹಿರಿಯರು, ಸಾಕಷ್ಟು ಪರಿಣತಿಯನ್ನು ಹೊಂದಿದವರು. ಅವರು ತಮ್ಮ ಸ್ವಂತ ಅಭಿಪ್ರಾಯವನ್ನು ಹೇಳಿದ್ದಾರೆ. ಆದರೆ, ಅವರು ವೃದ್ಧಾಪ್ಯ ವೇತನ ಪಡೆಯುತ್ತಿದ್ದಾರೆಂದು ಹೇಳುವುದು ಅಷ್ಟು ಉಚಿತವಾಗಲಾರದು. ಅವರು ಹಿರಿಯರು, ಅನುಭವಶಾಲಿಗಳು. ಅವರು ತಮ್ಮ ವೈಯುಕ್ತಿಕ ಅಭಿಪ್ರಾಯವನ್ನು ಹೇಳಿದ ಮಾತ್ರಕ್ಕೇ ನಾವದನ್ನು ಗಂಭೀರವಾಗಿ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಸರ್ಕಾರದ ಅಭಿಪ್ರಾಯದ ಮೇಲೆ ಅಥವಾ ಸರ್ಕಾರ ತೆಗೆದುಕೊಳ್ಳಬಹುದಾದ ನಿರ್ಣಯದ ಮೇಲೆ ಅವರ ಹೇಳಿಕೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಸರ್ಕಾರದ ಮೇಲೆ ಪ್ರಭಾವ ಬೀರುವುದು ತಜ್ಞರ ವರದಿ ಮಾತ್ರ. ತಜ್ಞರ ಸಮಿತಿಗೆ ವರದಿ ಸಲ್ಲಿಸಲು ಮೂರು ತಿಂಗಳ ಅವಧಿಯನ್ನು ನೀಡಲಾಗಿದೆ. ಅಂದರೆ, ಏಪ್ರಿಲ್ ತಿಂಗಳಲ್ಲಿ ಅವರ ವರದಿ ಬರುತ್ತದೆ. ಆದುದರಿಂದ, ಈ ವಿಚಾರವನ್ನು ಹೆಚ್ಚು ಬೆಳೆಸುವುದು ಸೂಕ್ತವಲ್ಲವೆಂದು ಈ ಸದನದ ಮುಖಾಂತರ ಎಲ್ಲರಲ್ಲೂ ಸಾರ್ವತ್ರಿಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾವು ಎತ್ತಿದ ಮುಖ್ಯವಾದ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರ ಬರಲಿಲ್ಲ. ಸರ್ಕಾರದವರು ತಜ್ಞರ ಸಮಿತಿಯನ್ನು ನೇಮಿಸಿದ್ದಾರೆ. ನಾವದನ್ನು ಸ್ವಾಗತ ಮಾಡಿದ್ದೇವೆ. ತಜ್ಞರ ಸಮಿತಿ ವರದಿ ಕೊಡುತ್ತದೆ. ಆದರೆ ಶ್ರೀಮಾನ್ ಚನ್ನಬಸಪ್ಪನವರು ಸರ್ಕಾರದವರು ರಚಿಸಿರುವ ನೀರಾವರಿ ಮಂಡಲಿಯ ಸಲಹಾ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಆದುದರಿಂದ, ಸರ್ಕಾರ ಅವರಿಗೆ ಎಚ್ಚರಿಕೆ ಕೊಡಬೇಕಾಗುತ್ತದೆ. ಅಧ್ಯಕ್ಷರಾಗಿರುವಾಗ ಈ ರೀತಿ ಹೇಳಿಕೆ ಕೊಡುವುದು ಅವರಿಗೆ ಸರಿಯಲ್ಲ. ಬೇಕಾದರೆ, ಅಧ್ಯಕ್ಷಗಿರಿ ಬಿಟ್ಟುಕೊಟ್ಟು ಒಂದೇ ಪತ್ರಿಕೆಯಲ್ಲಲ್ಲ ಎಲ್ಲಾ ಪತ್ರಿಕೆಗಳಲ್ಲೂ ಹೇಳಿಕೆ ಕೊಡಲಿ. ಇದು ಉತ್ತರ ಕರ್ನಾಟಕದ ಜನರ ಜೀವಾಳದ ಪ್ರಶ್ನೆ. ಆ ಬಗ್ಗೆ ಸರ್ಕಾರ ಒಂದು ಸಮಿತಿ ರಚಿಸಿರುವಾಗ, ಸರ್ಕಾರದ ಹುದ್ದೆಯಲ್ಲಿರುವವರು ಯಾವುದೇ ಅಭಿಪ್ರಾಯ ಕೊಡಬಾರದು. ಈಗ ಮಾನ್ಯ ಮೊಯಿಲಿಯವರು ಬೇಡ್ತಿ ಯೋಜನೆ ಬಗ್ಗೆ ಒಂದು ಲೇಖನ ಬರೆದರೆ ಏನು ಅಭಿಪ್ರಾಯವಾಗುತ್ತದೆ ? ಅದನ್ನು ಅವರ ವೈಯಕ್ತಿಕ ಅಭಿಪ್ರಾಯವೆಂದು ಹೇಳುವುದಕ್ಕಾಗುತ್ತದೆಯೇ ? ಅವರು ಎಲ್ಲಿಯವರೆಗೆ ಈ ರಾಜ್ಯದ ಅರ್ಥ ಮಂತ್ರಿಗಳಾಗಿರುತ್ತಾರೆ ಅಲ್ಲಿಯವರೆಗೆ ಅವರ

ಮಾತು ಸರ್ಕಾರದ ಅಭಿಪ್ರಾಯವಾಗುತ್ತದೆ. ಆದುದರಿಂದ, ಅವರು ಮಂತ್ರಿ ಪದವಿಗೆ ಸಮಾನ ಸ್ಥಾನ ದಲ್ಲಿದ್ದುಕೊಂಡು ಇಂತಹ ಲೇಖನಗಳನ್ನು ಬರೆಯಬಾರದು. ಅವರಿಗೆ ಸರ್ಕಾರ ಸೂಕ್ತ ಸೂಚನೆ ಕೊಡ ಬೇಕು. ಇಲ್ಲದೆ ಹೋದರೆ ಕಂಟೆಂಪ್ಟ್‌ಆಫ್ ಬೆಳೆಯುತ್ತಾ ಹೋಗುತ್ತದೆ. ಸರ್ಕಾರದ ಉದ್ದೇಶದ ಬಗ್ಗೆ ಸಂಶಯ ಹುಟ್ಟುತ್ತದೆ. ಸರ್ಕಾರ ಸಮಿತಿ ರಚಿಸಿ ಶ್ರೀಮಾನ್ ಚನ್ನಬಸಪ್ಪನವರಿಂದ ಲೇಖನ ಬರೆಸಿ, ಸಮಿತಿಯ ಕಾರ್ಯಕ್ಕೆ ಒಂದು ರೀತಿಯಲ್ಲಿ ಅಡ್ಡಿ ಆತಂಕವನ್ನುಂಟು ಮಾಡುತ್ತದೆಂಬ ಭಾವನೆ ಬರುತ್ತದೆ. ಅದೂ ಅಲ್ಲದೆ, ಆ ಜಿಲ್ಲೆಯ ಜನರ ಬಗ್ಗೆ ಅವರು ತಾಳಿರುವ ಭಾವನೆಯನ್ನು ತಾವು ಒಪ್ಪುತ್ತೀರಾ ? ಉತ್ತರ ಕರ್ನಾಟಕದ ಜನರು ಅರಾಷ್ಟ್ರೀಯರೇ ? ಇಂತಹ ಹೇಳಿಕೆಗಳನ್ನು ಶ್ರೀಮಾನ್ ಚನ್ನಬಸಪ್ಪನವರು ನೀರಾವರಿ ಮಂಡಲಿ ಸಲಹಾ ಸಮಿತಿಯ ಅಧ್ಯಕ್ಷರಾಗಿ ಕೊಡುವುದು ಯೋಗ್ಯವೆ ? ಇದನ್ನು ತಾವು ಒಪ್ಪುತ್ತೀರಾ ? ಇದು ಸರ್ಕಾರದ ಅಭಿಪ್ರಾಯವೆ ? ಆದುದರಿಂದ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಬಿ. ಶಿವಯ್ಯ.—ಶ್ರೀಮಾನ್ ಚನ್ನಬಸಪ್ಪನವರು ನೀರಾವರಿ ಮಂಡಲಿಯ ಅಧ್ಯಕ್ಷರಾಗಿ ಹೇಳಿಕೆ ಕೊಟ್ಟಿರುವುದು ತಜ್ಞರ ಸಮಿತಿಯನ್ನು ಪೇಚಿಗೆ ಸಿಕ್ಕಿಸಿದೆ. ಮಾನ್ಯ ಸಚಿವರು ಉತ್ತರ ನೀಡುತ್ತಾ, ಮೂರು ತಿಂಗಳ ಕಾಲಾವಧಿಯನ್ನು ವರದಿ ಸಲ್ಲಿಸಲು ಸಮಿತಿಗೆ ನೀಡಲಾಗಿದೆ ಎಂದು ಹೇಳಿದರು. ಈಗ ಕಾಂಟೆಂಪ್ಟ್‌ಆಫ್ ಉದ್ಭವವಾಗಿರುವುದರಿಂದ ಅವರು ಮೂರು ತಿಂಗಳಲ್ಲಿ ವರದಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಸಚಿವ ಸ್ಥಾನ ಸಮಾನವಾದ ಅಧ್ಯಕ್ಷ ಸ್ಥಾನದಿಂದ ಶ್ರೀಮಾನ್ ಚನ್ನಬಸಪ್ಪ ನವರು ಹೇಳಿಕೆ ಕೊಟ್ಟು ಈ ವಿಷಯದಲ್ಲಿ ಮಧ್ಯೆ ಪ್ರವೇಶ ಮಾಡಿರುವುದು ಸಮಿತಿಯವರನ್ನು ಪೇಚಿಗೆ ಸಿಕ್ಕಿಸಿದರೆ.

ಅಧ್ಯಕ್ಷರು.—ಅದು ತಮ್ಮ ಅಭಿಪ್ರಾಯದ ಮಾತು.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಸ್ವಾಮಿ, ಮೂರು ತಿಂಗಳಲ್ಲಿ ವರದಿ ಬರುವುದಕ್ಕೆ ಸಾಧ್ಯವಿಲ್ಲ ಅದು ನಿಜ. ಕಾಳಿ ನಿಂದ ಹಂತದ ಯೋಜನೆ, ಅಘನಾಶಿನಿ, ಬೇಡ್ತಿ ಎರಡನೇ ಸ್ಟೇಜ್, ಇದೆಲ್ಲಾ ಇರುವುದರಿಂದ, ಕಾಲಾವಕಾಶ ಕೊಡಬೇಕು ಎಲ್ಲಾ ಕಡೆ ಕೆಲಸ ನಿಲ್ಲಿಸುವಂತೆ ಭರವಸೆಯನ್ನು ಮಾನ್ಯ ಸಚಿವರು ಕೊಡುತ್ತಾರೆಂದು ನಾನು ಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಜ್ಞರ ಸಮಿತಿಯವರು ಕಾಲಾವಕಾಶ ಕೋರಿ ಅರ್ಜಿ ಸಲ್ಲಿಸಿ ರೆ, ಪರಿಶೀಲನೆ ಮಾಡಬಹುದು. ಈಗಾಗಲೇ ನಾನು ವೈಯಕ್ತಿಕವಾಗಿ ತಮ್ಮ ಅನಿಸಿಕೆಯನ್ನು ಕೊಟ್ಟಿದ್ದಾರೆಂದು ಹೇಳಿದೆ. ಅವರ ಅಭಿಪ್ರಾಯ ಏನಾದರೂ ಇದ್ದರೆ, ತಜ್ಞರ ಸಮಿತಿಗೆ ಕೊಡಲಿ ಎಂದು ಈ ಸದನದ ಮೂಲಕ ಅವರನ್ನು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಕೆಲಸ ನಿಲ್ಲಿಸಿ, ತಜ್ಞರ ಸಮಿತಿಗೆ ಅವಕಾಶ ಮಾಡಿ ಕೊಡಬೇಕು. ನ್ಯಾಯ ಇರಬೇಕು. ಆ ಭಾಗದ ಜನರಿಗೆ ಅಪಮಾನ ಮಾಡಿದರೆ ಸರ್ಕಾರ ಅವರನ್ನು ಕೇಳಲಿಕ್ಕೆ ಬರುವುದಿಲ್ಲವೆ ?

FINANCIAL BUSINESS

General Discussion on the Budget for the year 1981-82

†ಶ್ರೀ ಎಸ್. ಎಂ. ವೀರಣ್ಣಳಿಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷರೆ, ಸದನದ ಮುಂದೆ ಅರ್ಥಮಂತ್ರಿಗಳು ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ಸಂಪೂರ್ಣವಾಗಿ ಬೆಂಬಲಿಸಿ ನಾಲ್ಕು ಮಾತ ನಾಡಲಿಕ್ಕೆ ಬಯಸುತ್ತೇನೆ. ಸ್ವಾಮಿ, ನಿನ್ನೆತಾನೇ, ವಿರೋಧ ಪಕ್ಷದ ನಾಯಕರು ಮಾತನಾಡುವುದನ್ನು ಕೇಳುತ್ತಾ ಕೂತುಕೊಂಡಿದ್ದೆ.

ಅಧ್ಯಕ್ಷರು.—ಕೇಳುತ್ತಾ ಕೂತುಕೊಂಡಿದ್ದೆ ಅಂದರೆ ಏನು ಅರ್ಥ ?

ಶ್ರೀ ಎಸ್. ಎಂ. ವೀರಣ್ಣಳಿ ಚಂದ್ರಶೇಖರ್.—ಕೇಳಿದ್ದೇನೆ ಆಯಿತು ಅಮೆಂಡ್ ಮಾಡಿಕೊಂಡಿದ್ದೇನೆ ಅವರ ಈ ಸದನದ ಸದಸ್ಯತ್ವದ ವರ್ಷವೇ ೪೦ ವರ್ಷಕ್ಕೆ ಮೇಲಾಗಿದೆ. ಆ ವಿಚಾರದಲ್ಲಿ ಪ್ರಶ್ನಾತೀತ ವಾದುದು, ಬಹಳ ಹಿರಿಯ ರಾಜಕಾರಣಿ, ಬಹಳ ಗೌರವಾನ್ವಿತರಾದವರು ನಮಗೆಲ್ಲರಿಗೂ ಪೂಜ್ಯರು.